"ಇವತ್ತು ಬೆಳಿಗ್ಗೆ ಹತ್ತೂವರೆಯ ಹೊತ್ತಿಗೆ ಗ್ರಾಮಾಂತರ ಠಾಣೆಯಲ್ಲಿ ದೂರು ಕೊಟ್ಟೆವು. ನನ್ನ ಒತ್ತಾಯದ ಮೇರೆಗೆ ಆಕೆ ಕೊಟ್ಟಳು ಅನ್ನಬಹುದು..."

"ಅಲ್ಲಿ ವೆಲೆಂಟೈನ್ ಡಿಸೋಜ ಅಲ್ವೆ ಸರ್ಕಲ್ ಆಗಿರೋನು?"

"ಹೌದು. ಅವ್ನೂ ಕಾಟಾಚಾರಕ್ಕೆ ಅಂತ ಬಂದು, ಮನೆಗೆ ಒಂದು ಸುತ್ತು ಹೊಡ್ದು ಹೋಗಿದಾನೆ. ವರ್ಷಿಣಿ ಅದೇ ಪುಂಗಿ ಊದಿದಾಳೆ. ಅದಿಕ್ಕೆ ಅವ್ನು ಒಂದೆರಡು ದಿನ ನೋಡೋಣ ಅಂತ ಹೇಳಿದಾನೆ. ನನಗ್ಯಾಕೊ ತನಿಖೆ ಸರಿಯಾಗಿ ಆಗ್ತಿಲ್ಲ ಅನ್ಸುತ್ತಾ ಇದೆ. ವರ್ಷಿಣಿ ಆ ಚೆಂಗಪ್ಪನ ಜೊತೆ ಸೇರಿ ಮೋಹಿತನನ್ನು ಅಪಹರಿಸಿರಬೇಕು ಅಂತ ನನ್ಗೆ ಬಲವಾದ ಗುಮಾನಿ ಇದೆ."

"ಅದ್ಯಾಕೆ ಹಾಗೆ ನಿಮ್ಗೆ ಅನುಮಾನ?"

"ನಿಮ್ಗೊಂದು ವಿಷ್ಯ ಹೇಳ್ತೀನಿ. ಈ ವರ್ಷಿಣಿ ಮೋಹಿತನ ಎರಡನೇ ಹೆಂಡ್ತಿ. ನನ್ನ ಪ್ರಕಾರ ಆತನಿಗೆ ಹೇಳ್ಸಿದ ಹುಡುಗಿಯಲ್ಲ. ಐವತ್ತರ ಮೋಹಿತನಿಗೆ ಮೂವತ್ತರ ವರ್ಷಿಣಿ! ಅವ್ಳು ಬಹಳ ಚಾಲಾಕಿ ಹೆಣ್ಣು. ಇವ್ನ ಆಸ್ತಿ ನೋಡಿ ಮದ್ವೆಯಾಗಿದಾಳೆ. ಮಕ್ಳು ಮರಿ ಅಂತ ಏನೂ ಇಲ್ಲ. ಆ ಚೆಲ್ಲು ಚೆಲ್ಲು ಹುಡುಗಿಯ ಪ್ರಿಯಕರ ಯಾರು ಗೊತ್ತೆ? ಆ ಉದ್ದಪಂಡ ಚೆಂಗಪ್ಪ! ಆದ್ರೆ ಮೋಹಿತನಿಗೆ ಅದು ಅರ್ಥವೇ ಆಗೋಲ್ಲ. ನಾನು ಎಚ್ಚರಿಕೆ ನೀಡಿದ್ರೂ ಅವ್ನು ಚೆಂಗಪ್ಪನ ಬಗ್ಗೆ ತಲೆ ಕೆಡಿಸಿಕೊಂಡಿಲ್ಲ. ಈ ಚೆಂಗಪ್ಪ ರಾಜಾರೋಷವಾಗಿ ಮನೆಗೆ ಬರ್ತಾ ಇರ್ತಾನೆ! ಅವ್ರೇ ಏನೋ ಕಿತಾಪತಿ ಮಾಡಿರ್ಬೇಕು. ನೀವು ದಯವಿಟ್ಟು ಸಹಕಾರ ಕೊಡಬೇಕು, ಸಾರ್."

ನಾವು ಮರುದಿನ ಬೆಳಿಗ್ಗೆ ಹನ್ನೊಂದಕ್ಕೆ ಅಲ್ಲಿಗೆ ಬರುವುದಾಗಿ ತಿಳಿಸಿದ ಮೇಲೆ, ಸೋಮಯ್ಯ ಹೊರಟು ಹೋದ.

★★★

ಮರುದಿನ ನಾವು ನಾಪೋಕ್ಲು ತಲುಪಿದಾಗ ಹತ್ತು ಗಂಟೆಗೆ ಇನ್ನೂ ಹತ್ತು ನಿಮಿಷ ಬಾಕಿಯಿತ್ತು. ಸೋಮಯ್ಯನಿಗೆ ಹನ್ನೊಂದು ಅಂತ ಹೇಳಿ, ಮೊದಲೇ ಬಂದಿರುವುದರ ಹಿಂದೆ ಕರಮಚಂದನ ಹಂಚಿಕೆ ಏನೋ ಇರಬೇಕು ಅಂತ ತರ್ಕಿಸಿದೆ. ಒಂದು ಆಟೋ ಹಿಡಿದು, ಗಮ್ಯ ಸ್ಥಾನ ತಲುಪಿದೆವು. ರಸ್ತೆಯಲ್ಲಿ ನಿಂತಾಗ, ಬೆಟ್ಟದಲ್ಲಿ ಹಾದು ಹೋದ ಮಣ್ಣಿನ ಹಾದಿ, ಎತ್ತರದ ಮರಗಳ ಮರೆಯಲ್ಲಿ ಮನೆಯೊಂದು ಕಾಣಿಸುತ್ತಿತ್ತು. ಅದುವೇ ಮೋಹಿತನ ಮನೆಯೆಂಬುದರಲ್ಲಿ ಸಂಶಯವಿರಲಿಲ್ಲ. ಬೆಟ್ಟದ ತಪ್ಪಲಲ್ಲಿ ಚಿಕ್ಕದೊಂದು ಬೀಡಾಬೀಡಿ ಅಂಗಡಿಯಿತ್ತು. ಅಲ್ಲಿ ಸಿಗರೇಟು ಖರೀದಿಸಿದ ಕರಮಚಂದ ಅವನೊಂದಿಗೆ ಮಾತಿಗಿಳಿದ. ಆಗಂತುಕರಿಬ್ಬರೂ ತನ್ನ ಮಾತಿಗೆ ಕೊಡುವ ಪ್ರಾಶಸ್ತ್ಯದಿಂದ ಪ್ರಭಾವಿತನಾದ ಆತ, ಉತ್ಸಾಹದಿಂದಲೇ ನಮ್ಮ ಪ್ರಶ್ನೆಗೆ ತುಸು ಹೆಚ್ಚೇ ಅನ್ನುವಂತೆ ವಿವರಗಳನ್ನು ನೀಡತೊಡಗಿದ.

"ಈ ರಸ್ತೆಲಿ ಹೋಗುವ ವಾಹನಗಳೇನಿದ್ರೂ ಮೋಹಿತ್ ಸಾರ್ ಮನೆಗೆ ಹೋಗುವಂತಹದು. ಹೆಚ್ಚಾಗಿ ಅವ್ರ ಹೆಂಡ್ರು ಕಾರು ಹೊಡ್ಕೊಂಡು ಹೋಗ್ತಾರೆ. ಅವ್ರು ಹೋಗೋದು ತೀರಾ ಅಪರೂಪ. ಕೆಲವೊಮ್ಮೆ ಚೆಂಗಪ್ಪ ಅಂತ ಒಬ್ರು ಅವ್ರ ಫ್ರೆಂಡು ಬರ್ತಾರೆ. ಅವ್ರು ನನ್ನ ಹತ್ರ ಸಿಗರೇಟು ತೆಗೆದುಕೊಳ್ಳದೆ ಹೋಗೋದೇ ಇಲ್ಲ. ಗೊಬ್ಬರ ಹೊತ್ತ ಟ್ರಾಕ್ಟರುಗಳು ಆಗಾಗ್ಗೆ ಹೋಗ್ತಾವೆ ಅವ್ರ ಎಸ್ಟೇಟಿಗೆ. ಈ ರಸ್ತೆಲಿ ಓಡಾಡೋ ಮಂದಿಯೂ ಕಮ್ಮಿ. ಅವ್ರ ಎಸ್ಟೇಟಿನ ಕೆಲ್ಸಗಾರರು ಬಿಟ್ರೆ, ಬೇರೆಯೋರು ಹೋಗೋದಾದ್ರೂ ಎಲ್ಲಿಗೆ? ಹಾಗಾಗಿ, ಹೊಸ ಮುಖ